ಅವರಿಗೆ ಇತ್ತು. ನಮ್ಮ ಭಾಗದವರಾಗಿರುವಂಥ ಸನ್ಮಾನ್ಯ ಶ್ರೀ ಬಿ.ಜಿ. ಬಣಕಾರ ಸಾಹೇಬರ ಬಗ್ಗೆ ಕೂಡ ಇಲ್ಲಿ ನಾನು ಬಹಳ ಹೇಳುತ್ತಿದ್ದೆ. ಅವರು ದಿಟ್ಟ ಮನಸ್ಸಿನಿಂದ ಮಾತನಾಡುವ ಶೈಲಿ ನೋಡಿದರೆ ಅವರೆಲ್ಲರಿಗಿಂತಲೂ ಒಳ್ಳೆಯ ಕಾರ್ಯವನ್ನು ಮಾಡಿಕೊಂಡು ಈ ಕರ್ನಾಟಕ ರಾಜ್ಯದಲ್ಲಿ ಈ ವಿಧಾನಸಭೆಯ ಹೆಸರನ್ನು ತಾವು ತರುತ್ತೀರಿ ಎನ್ನುವ ಆಶಯವನ್ನು ವ್ಯಕ್ತಪಡಿಸಿಕೊಂಡು ಮೊದಲನೆಯದಾಗಿ ತಾವು ನಿಷ್ಪಾವಂತರು. ಪ್ರಾಮಾಣಿಕವಾಗಿ ದುಡಿದಂಥವರು. ನಿಮಗೆ ನನ್ನ ಪರವಾಗಿ ಅಭಿನಂದನೆಗಳನ್ನು ವ್ಯಕ್ತಪಡಿಸಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗಾಗಲೇ ಸಾಕಷ್ಟು ಸದಸ್ಯರು ಅಭಿನಂದನೆಯ ವಿಷಯದ ಮೇಲೆ ಮಾತನಾಡಿದ್ದಾರೆ. ನಾನು ನಿಮ್ಮಲ್ಲರ ವಿಚಾರಗಳಿಗೆ ಸ್ಪಂದನೆ ಮಾಡುವುದಕ್ಕೆ ಮುಂಚೆ ಎರಡು ಪ್ರಕಟಣೆಗಳನ್ನ ಪ್ರಕಟಣೆ ಮಾಡುತ್ತಿದ್ದೇನೆ.

3. ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ದಿನಾಂಕ: 2-06-2008ರಂದು ಪತ್ರವನ್ನು ನೀಡಿದ್ದು ದಿ:26-05-2008 ರಂದು ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆಂದು ತಿಳಿಸಿ ಅಂಗೀಕರಿಸಲಾದ ನಿರ್ಣಯದ ಪ್ರತಿಯನ್ನು ನೀಡಿರುತ್ತಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ 80 ಸದಸ್ಯರನ್ನು ಹೊಂದಿದ್ದು ಅತಿ ದೊಡ್ಡ ಪಕ್ಷವಾಗಿರುವ ಕಾರಣ ಹಾಗೂ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 2(2) ರಲ್ಲಿ ಹೇಳಿರುವ ರೀತಿ ಎಲ್ಲಾ ಅಂಶಗಳನ್ನು ಪರಿಗಣಿಸಿದ್ದು ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ವಿರೋಧ ಪಕ್ಷದ ನಾಯಕರೆಂದು ತಕ್ಷಣದಿಂದ ಜಾರಿಗೆ ಬರುವಂತೆ ಮನ್ನಣೆ ನೀಡಲಾಗಿದೆ.

1) ವಿಷಯ :- ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ವಿರೋಧ ಪಕ್ಷದ ನಾಯಕರ ಸ್ಥಾನಮಾನ ನೀಡಿರುವ ಕುರಿತು.

2) ವಿಷಯ :- ಶ್ರೀ ಡಿ.ಎನ್. ಜೀವರಾಜ್‌ರವರನ್ನು ವಿಧಾನ ಸಭೆಯಲ್ಲಿ ಸರ್ಕಾರ ಮುಖ್ಯ ಸಚೇತರನ್ನಾಗಿ ನೇಮಕ ಮಾಡಿರುವ ಬಗ್ಗೆ.

ಅಧ್ಯಕ್ಷರು : ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಡಿ.ಎನ್.

ಜೀವರಾಜ್‌ರವರನ್ನು ವಿಧಾನ ಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತರನ್ನಾಗಿ ನೇಮಕ ಮಾಡಲಾಗಿದೆ. ಎಂದು ಮಾನ್ಯ ಮುಖ್ಯಮಂತ್ರಿಯವರು ಪತ್ರದ ಮುಖೇನ ತಿಳಿಸಿರುತ್ತಾರೆಂದು ಈ ಮೂಲಕ ಪ್ರಕಟಿಸಲಾಗಿದೆ.

ಅಧ್ಯಕ್ಷರು ; ಗೌರವಾನ್ವಿತ ಸದಸ್ಯರೆ. ಇಲ್ಲಿಯವರೆಗೂ ಈ ಒಂದು ಸದನದ ಸಭಾಧ್ಯಕ್ಷರಾಗಿ ಅವಿರೋಧವಾಗಿ ಮತ್ತು ಎಲ್ಲರ ಒಮ್ಮತದ ಸಭಾಧ್ಯಕ್ಷರನ್ನಾಗಿ ನನ್ನನ್ನು ತಾವು ಆಯ್ಕೆ ಮಾಡಿದ್ದೀರಿ ಮತ್ತು ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದೀರಿ. ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದೀರಿ. ಮೊಟ್ಟಮೊದಲು ಈ 13ನೇ ವಿಧಾನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ತಮ್ಮೆಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಾನು ಈ ಸಭೆಯ 17ನೇ ಅಧ್ಯಕ್ಷನಾಗಿದ್ದು ನನ್ನ ಪೂರ್ವದಲ್ಲಿ ಕೆಲಸ ಮಾಡಿರುವ ಎಲ್ಲಾ ಅಧ್ಯಕ್ಷರ ಕೊಡುಗೆಗಳನ್ನು ಸ್ಮರಿಸಬಯಸುತ್ತೇನೆ. ಇಂದಿನ ಈ ಸರ್ವಾನುಮತದಿಂದ ಆಯ್ಕೆಗೆ ಕಾರಣಕರ್ತರಾದ ಮಾನ್ಯ ಮುಖ್ಯಮಂತ್ರಿಗಳು. ಮಾನ್ಯ ವಿರೋಧಪಕ್ಷದಲ್ಲಿರುವ ಎಲ್ಲಾ ನಾಯಕರಿಗೂ ಮತ್ತು ಗೌರವಾನ್ವಿತ ಸದಸ್ಯರಿಗೂ ನಾನು ಋಣಿಯಾಗಿರುತ್ತೇನೆ. ಈ ಸಭೆಯ ಸಾರ್ವಭೌಮತ್ವವನ್ನು ಮತ್ತು ಘನತೆಯನ್ನು ಎತ್ತಿಹಿಡಿಯುವುದು ನಮ್ಮೆಲ್ಲರ ಪ್ರಥಮ ಕರ್ತವ್ಯ. ಈ ಕರ್ತವ್ಯದಲ್ಲಿ ನಾನು ಯಾವುದೇ ಚ್ಯುತಿ ಬಾರದಂತೆ ಹಾಗೂ ಸಭೆಯ ಒಳ್ಳೆಯ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವ ಹಿಂದಿನ ಅಧ್ಯಕ್ಷರುಗಳಾದಂಥ ಮಾನ್ಯ ಹೆಚ್. ಸಿದ್ದಯ್ಯ. ಎಸ್.ಆರ್.ಕಂಠಿ. ಪ್ರಮುಖವಾಗಿ ಮಾನ್ಯ ವೈಕುಂಠ ಬಾಳಿಗರವರು. ಎಸ್.ಡಿ. ಕೋಠಾವಳಿಯವರು. ಜಿ. ಬಣಕಾರ್‌ರವರು. ರಮೇಶ್ ಕುಮಾರ್, ಚಂದ್ರೇಗೌಡ. ಎಸ್.ಎಂ.ಕೃಷ್ಣರವರು ಇಂಥ ಗಣ್ಯ ವ್ಯಕ್ತಿಗಳು ಅಲಂಕರಿಸಿರುವ ಈ ಸ್ಥಾನವನ್ನು ತಾವೆಲ್ಲರೂ ಸೇರಿ ನನಗೆ ಒದಗಿಸಿಕೊಟ್ಟಿರುತ್ತೀರಿ. ಈ ದಿಶೆಯಲ್ಲಿ ಈ ಸ್ಥಾನಕ್ಕೆ ನನ್ನಿಂದ ಯಾವುದೇ ರೀತಿಯಾದ ಚ್ಯುತಿಯಾಗದಂತೆ ನಡೆದುಕೊಳ್ಳುವ ಆಶ್ವಾಸನೆಯನ್ನು ತಮಗೆ ನೀಡಲು ಇಚ್ಚಿಸುತ್ತೇನೆ. ಸದನದ ಗೌರವ–ಘನತೆ ಸತ್ಸಂಪ್ರದಾಯಗಳನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ರಾಷ್ಟ್ರದ ಅತ್ಯುನ್ನತ ಸಂವಿಧಾನ ಬುನಾದಿಯಾದ ಸಂಸತ್ತಿನಲ್ಲಿ ಉತ್ತಮ ಸಂಸದೀಯರಾದಂಥ ಅತ್ಯಂತ ಮೇಧಾವಿಗಳು ಸಂವಿಧಾನ ಪರಿಣಿತರಾದ ವಿಠಲ್ ಭಾಯ್ ಪಟೇಲ್‌ರವರು ಹಾಗೂ ಲೋಕಸಭೆಯ ಪ್ರಥಮ ಅಧ್ಯಕ್ಷರಾದ ಶ್ರೀ ಮಾವಳಂಕರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿ ಕೀರ್ತಿ. ಶ್ರೇಷ್ಟತೆಗಳೊಂದಿಗೆ ಕಲಾಪಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಒಳ್ಳೆಯ ಪರಂಪರೆಯನ್ನು ನೀಡಿ ಮಾರ್ಗದರ್ಶನವನ್ನು ಇಟ್ಟಿರುತ್ತಾರ. ಈ ಸಭೆಯ ಅಧ್ಯಕ್ಷ